# ಮಲೆನಾಡು ದುಡಿವ ಜನರದ್ದು! ಶೋಷಕರ ಸಂಪತ್ತು ಜನರ ಹಕ್ಕು !!

ಮಾನ್ಯರೇ,

ಫೆಬ್ರವರಿ 1ರಂದು ನಮ್ಮ ಪಕ್ಷದ ಪಿಎಲ್‌ಜಿಎ (ಪ್ರಜಾ ವಿಮೋಚನಾ ಗೆರಿಲ್ಲಾ ಸೇನೆ) ಯ ದಳವು ಅರುಣ –ಕಿರುಣರೆಂಬ ಭೂಮಾಲೀಕರಿರುವ ಆಗುಂಬೆ ಸಮೀಪದ ಹಳ್ಳಿ ಬಿದರಗೋಡಿನ ಮನೆಗೆ ದಾಳಿ ಮಾಡಿ ಅವರ ದೌರ್ಜನ್ಯಗಳ ಬಗ್ಗೆ ಗಂಭೀರ ಎಚ್ಚರಿಕೆ ನೀಡಿ ಊರುಬಿಟ್ಟು ಹೋಗಬೇಕೆಂದು ಆದೇಶಿಸಿತು. ಈತನ ಕುತಂತ್ರ –ಕ್ರೂರ–ದಂದೆಗಳು ನೂರಾರು. ಅದನ್ನು ಹೊರಜಗತ್ತಿಗೆ ಈ ಮೂಲಕ ತಿಳಿಸುತ್ತಾ ಸಿ.ಪಿ.ಐ. (ಮಾವೋವಾದಿ) ಪಕ್ಷವು ಈ ದಾಳಿಯನ್ನು ಸಮರ್ಥಿಸಿಕೊಳ್ಳುತ್ತದೆ. ಅರುಣ–ಕಿರಣರು ಯಾರು ? ಹಳ್ಳಿ ಬಿದರಗೋಡ್‌ನಲ್ಲಿ ದೊಡ್ಡ ಐಶಾರಾಮಿ ಹಳೆಯ ಮನೆಯಲ್ಲಿ ವಾಸಿಸುತ್ತಿರುವ ಈ ಅಣ್ಣತಮ್ಮಂದಿರು ತಮ್ಮ ಸುತ್ತಮುತ್ತಲೂ 15–20 ಒಕ್ಕಲಿಟ್ಟುಕೊಂಡಿದ್ದು ಅವರೆಲ್ಲ ಬಹುಪಾಲು ಮುಕ್ಕಾಲು ಮೂರು ಹೊತ್ತೂ ಇವರು ಹೇಳಿದಂತೆ ಕೇಳಬೇಕು. ಈ ಸುತ್ತಮುತ್ತಲಿನವೆಲ್ಲವನ್ನೂ ತಮ್ಮ ಕೈಯೊಳಗೆ ಇಟ್ಟುಕೊಂಡು ಹಳೆಯ ಪಾಳೆಗಾರರಂತೆ ಇಲ್ಲಿ ಆಳುತ್ತಿದ್ದಾರೆ. ಇವರ ದರ್ಪ ದೌರ್ಜನ್ಯಗಳಿಗೆ ಯಾರೂ ಎದುರಾಡುವಂತಿಲ್ಲ. ಇವರನ್ನು ಹೇಳುವವರು–ಕೇಳುವವರು ಇರಲಿಲ್ಲ.

ಮೇಲ್ನೋಟಕ್ಕೆ ಇವರ ಆಸ್ತಿ ಇಷ್ಟಿಗೆ : ಸುಮಾರು ನೂರಿನ್ನೂರು ಎಕರೆಗೂ ಹೆಚ್ಚು ಜಾಗವಿದ್ದು ಇದರಲ್ಲಿ 250 ಕ್ವಿಂಟಾಲ್‌ಗೂ ಹೆಚ್ಚು ಅಡಿಕೆಯಾಗುತ್ತದೆ, ಹಾಗೂ 50ಎಕರೆಯಷ್ಟು ಗದ್ದೆಯನ್ನು ದೇಣಿಗೆ ನೀಡಿ ಅದಕ್ಕೆ ಅರ್ಧದಷ್ಟು ಗೇಣಿ ವಸೂಲಿ ಮಾಡುತ್ತಾರೆ. ಮನೆಯ ಬಳಿಯಲ್ಲದೆ ನಟ್ಟೆಬೈಲ್, ಕೆರೆಬೈಲ್, ಹಳ್ಳಿಬಿದರಗೂಡಿನಲ್ಲಿ ಇವರ ಜಮೀನಿದೆ.. ಒಟ್ಟು 41ಕ್ಕೂ ಹೆಚ್ಚು ಸೈಟ್‌ಗಳು ಇವರ ಮತ್ತು ಬೇನಾಮಿ ಹೆಸರಿನಲ್ಲಿದೆ. ಬಿದರಗೋಡಿನಲ್ಲಿ 4000–00ರೂ ಲಾಭ ಬರುವ ಬಿಲ್ಡಿಂಗ್ ಬಾಡಿಗೆಗಿದೆ. ಇತ್ತೀಚೆಗೆ ಕೋಳಿಫಾರಂ ಕೂಡ ಮಾಡಿಕೊಂಡಿದ್ದಾರೆ. ಒಂದು ಜೀಪು, ಬೈಕು, ಟಿಲ್ಲರ್‌ಗಳನ್ನು ಇಟ್ಟುಕೊಂಡಿದ್ದಾರೆ. ಕಣ್ಣಿಗೆ ಕಾಣುವಂತಹವು ಇಷ್ಟಾದರೆ ಕಾಣದಿರುವಂತದ್ದು ಇನ್ನೇಷ್ಟೋ.

ಇವುಗಳನ್ನೆಲ್ಲ ಸಾಧಿಸಿಕೊಳ್ಳುವುದಕ್ಕೆ ಅವರು ಹಿಡಿದ ಅಡ್ಡದಾರಿ – ಕುತಂತ್ರಗಳ ಬಗ್ಗೆ ಸಾಮಾನ್ಯ ಜನರಿಗೆ ಯೋಚಿಸಲು ಅಸಾಧ್ಯವೇ

ಇವರ ಕ್ರಿಮಿನಲ್ ಕೆಲಸಗಳು

ಮನೆ ಸುಡಿಸುವುದು : ಇವರು ಹೇಳಿದಂತೆ ಕೇಳದಿದ್ದರೆ – ಇವರ ಮನೆಗೆ ಕೂಲಿಗೆ ಬರದಿದ್ದರು ಕೂಡ ಅವರ ಮನೆಯನ್ನು ತಮ್ಮಕೆಲಸದವರಿಂದ ಸುಡಿಸುವುದು, ಕೆಲಸವನ್ನು ಜನ ಮನೆಯಲ್ಲಿದ್ದಾಗಲೇ ಹೆಂಗಸರನ್ನು ಸೇರಿದಮತೆ ಎಳೆದುಕಾಕಿಸಿ ಕಿರಣನೇ ಬೆಂಕಿ ಇಡಿಸಿದ್ದಾನೆ. ಹೀಗೆ 4–5 ಮನೆಗಳಿಗೆ ಬೆಂಕಿ ಇಟ್ಟು ನಿರ್ಗತಿಕರನ್ನಾಗಿಸಿ ಅವರು ತಮ್ಮ ಕಾಲಿಗೆ ಬೀಳುವಂತೆ ಮಾಡುತ್ತಾರೆ. ಈ ರೀತಿ ಮನೆ ಸುಡಿಸಿ ಖುಷಿ ಪಡಿಸುವುದಷ್ಟೇ ಇವರಿಗೆ ಗೊತ್ತಿತ್ತು.

1) ಕೂಲಿ : ತನ್ನ ಮನೆಗೆ ಬರುವ ಕೂಲಿಯವರಿಗೆ ಕನಿಷ್ಠ ಕೂಲಿಯನ್ನು ನೀಡದೆ 30–50ರೂ ನೀಡಿಊಟ ಕಾಫಿಯೂ ಇಲ್ಲದೆ ಒಂದಕ್ಕೆ ಎರಡು ಲೆಕ್ಕ ಬರೆಯುತ್ತಾರೆ.
2) ಭೂಮಿ ಕಬಳಿಗೆ : ಸುತ್ತಮುತ್ತಲಿನ ಸಣ್ಣ ತುಂಡು ಜಾಗವನ್ನು ಬಿಡದೆ ಜನರು ಸೊಪ್ಪು –ಸೌದೆ– ದನ ಮೇಯಿಸಲು ಪರದಾಡುವಂತೆ ಮಾಡಿದ್ದಾರೆ.. ಹಿಂದೆ ಭೂಸುಧಾರಣಾ ಕಾಯ್ದೆ ಬಂದಾಗಿನಿಂದ ಇಲ್ಲಿಯವರೆಗೂ ಇವರದು ಇದೇ ಚರಿತ್ರೆ.. ತಮ್ಮ ಒಕ್ಕಲುಗಳು 5 ಎಕರೆ ಸಾಗುವಳಿ ಮಾಡುತ್ತಿದ್ದರೆ "ನೀನು ಮಾಡಿದ್ದು ಇಷ್ಟೇ ಎಂದು ತುಂಡು ಜಾಗವನ್ನಷ್ಟೇ ನೀಡಿದ್ದಾರೆ.
3) ಅವರ ಮನೆಗೆ ಕೂಲಿಗೆ ಹೋಗುವ ಒಬ್ಬರ ಒಳ್ಳೆಯ ನೀರಾವರಿ ಜಾಗವನ್ನು ತಾವೇ ಇಟ್ಟುಕೊಂಡು ಬೇಕೆಂದು ಕೇಳಿದ್ದಕ್ಕೆ ಹೊಡೆದು ಬಡಿದು ಇನ್ನು ಕೇಳಬಾರದೆಂಬಂತೆ ಮಾಡಿದ್ದಾರೆ.
4) ಈಗಲೂ 50 ಎಕರೆ ಗದ್ದೆಯನ್ನು ಗೇಣಿಗೆ ಕೊಟ್ಟು ಹಾಯಾಗಿ ಕುಳಿತು ಒಂದೇ ಒಂದು ಹಾರೆ ಮಣ್ಣನ್ನೂ ತೆಗೆಯದೆ ಅರ್ಧಕ್ಕರ್ಧ ಗೇಣಿ ಗಿಟ್ಟಿಸಿಕೊಳ್ಳುತ್ತಾರೆ.
5) ಜನರಿಗೆ ಸಾಲಕೊಟ್ಟು ತೀರಿಸಿಲ್ಲವೆಂದರೆ ಇಲ್ಲವೇ ತಡವಾದರೂ ಸಾಕು ಜಮೀನು ಅವರ ಪಾಲಾಗುತ್ತದೆ.
6) ಕೂಲಿಯವರದ್ದು ಹೋಗಲಿ ಕನಿಷ್ಠ ತಮ್ಮ ದೊಡ್ಡಪ್ಪನವರಿಗೂ ಸರಿಯಾದ ಪಾಲು ನೀಡದೆ ಹೊರಹಾಕಿದ್ದಾರೆ.

ಸರ್ಕಾರಿ ಸೌಲಭ್ಯಕ್ಕಾಗಿ ರಾಜಕೀಯ : ಈ ಹಳ್ಳಿಗೆ ಯಾವುದೇ ಸೌಲಭ್ಯ ಬರಲು ಬಿಡುವುದಿಲ್ಲ, ಬಂದಿರೋದೆಲ್ಲಾ ತಮ್ಮ ಬಾಗಿಲಿಗೆ ಬೀಳುವಂತೆ ನೋಡಿಕೊಳ್ಳುತ್ತಾರೆ.

- ಹಂಡಿಗೆ, ಮುತ್ತೊಳ್ಳಿ, ಹಳ್ಳಿಬಿದರಗೋಡುಗಳನ್ನು ನಕ್ಸಲ್ ಪೀಡಿತ ಪ್ರದೇಶವೇಂದು ಪ್ರಚಾರ ಮಾಡಿ 20ಲಕ್ಷ ಬಿಡುಗಡೆಮಾಡುವಂತೆ ಮಾಡಿ ತಮ್ಮ ಮನೆಗೆ ರೋಡ್ ಮಾಡಿಸಿಕೊಂಡಿದ್ದಾರೆ.
- ಗ್ರಾಮ ಪಂಚಾಯ್ತಿ ಸದಸ್ಯನಾದಾಗ ಶಾಲೆಗೆ ಮಂಜೂರಾದ ಹಣವನ್ನು ತಾನೇ ನುಂಗಿದ್ದ.
- ಇವರುಗಳೇ ಎಲ್ಲಕ್ಕೂ ಅಧ್ಯಕ್ಷರು / ಕಾರ್ಯದರ್ಶಿಗಳಾಗಿದ್ದರಿಂದ ಎಲ್ಲೆಲ್ಲಿ ಏನೇನು ಹೊಡೆದುಕೊಳ್ಳಲು ಸಾಧ್ಯ ಅದನ್ನೆಲ್ಲಾ ಮಾಡಿದ್ದಾರೆ. ಅರಣ್ಯ ಸಮಿತಿಗೆ ಅಧ್ಯಕ್ಷನಾಗಿದ್ದಾಗ 41 ಸೈಟುಗಳನ್ನು ತನ್ನದಾಗಿಸಿಕೊಂಡು ಅಲ್ಲೆಲ್ಲ ಮರ ಹಾಕಿಸಿಕೊಂಡಿದ್ದಾರೆ. ನೀರಿಗೆ ಪರದಾಡುವ ಈ ಭಾಗದಲ್ಲಿ ಕುಡಿಯುವ ನೀರು ಸರಬರಾಗಿಜಿಗೆ ಸರ್ಕಾರದಿಂದ ನೀಡಿದ ಸಿಂಟೆಕ್ಸ್ ಡ್ರಂಅನ್ನು ತಮ್ಮ ಮನೇಲೆ ಇಟ್ಟುಕೊಂಡಿದ್ದಾರೆ.

ಲಂಪಟ ಅಣ್ಣತಮ್ಮಂದಿರು : ಸಾಕಷ್ಟು ಸಾಚಾಗಳಂತೆ ವರ್ತಿಸುವ ಇವರಿಬ್ಬರಿಗೂ ಕೂಲಿ ಹೆಣ್ಣುಮಕ್ಕಳನ್ನು ಬೇಕಾಬಿಟ್ಟಿ ಬಳಸಿಕೊಂಡು ಈ ಬಗ್ಗೆ ಅವರು ತಮ್ಮ ಮನೆಯಲ್ಲೂ, ಮದುವೆಯಾದ ಹೆಣ್ಣುಮಕ್ಕಳು ತಮ್ಮ ಗಂಡಂದಿರ ಬಳಿಯೂ ಈ ಬಗ್ಗೆ ಏನನ್ನೂ ಹೇಳದಂತೆ ಬಾಯಿಮುಚ್ಚಿಸಿದ್ದಾರೆ. ತಿಳಿದರೂ ಇಂತಹ ಯಾವುದೇ ಅನ್ಯಾಯ – ಅತ್ಯಾಚಾರಗಳ ಬಗ್ಗೆ ಗಂಡಂದಿರಿಂದಲೇ ಈ ಮಹಿಳೆಯರಾಗಲಿ ಉಸಿರೆತ್ತುವಂತಿಲ್ಲವೆಂಬಂತೆ ಮಾಡಿದ್ದಾರೆ.

ಜಗಳ ಹಚ್ಚುತ್ತಿರುವುದೇ ಇವರ ಕಾಯಕ : ತಮ್ಮ ಲಾಭಕ್ಕಾಗಿ, ತಮ್ಮ ವಿರುದ್ಧ ಇರುವವರು ಮಾತಾಡದಂತೆ ಮಾಡಲು ಎಂತಹ ನೀಚತನಕ್ಕಾದರೂ ಇಳಿದು ತಮ್ಮ ಕಾರ್ಯಸಾಧಿಸಿಕೊಳ್ಳುವ ಇವರು ತಮ್ಮ ಮನೆಗೆ ಕೆಲಸಕ್ಕೆ ಬರುವ ಕೂಲಿಯವರನ್ನು ಬಳಸಿಕೊಂಡು ಎಲ್ಲಿ ಬೆಂಕಿ ಇಡಬೇಕು, ಎಲ್ಲಿ ಜಗಳ ಹಚ್ಚಬೇಕು, ಯಾವ ಹೆಣ್ಣುಮಕ್ಕಳನ್ನು ಏನುಮಾಡಬೇಕು ಎಲ್ಲಾ ಯೋಜಿಸಿಕೊಳ್ಳುತ್ತಾರೆ..

ಉದಾಹರಣೆ ; ಒಕ್ಕಲಾಟ ನಡೆಯುವಾಗಲೇ ಕಣಕ್ಕೆ ಅಗಳು ಕಡಿಸೋದು, ತಮಗೆ ಆಗದವರು ಓಡಾಡುವ ದಾರಿಗಳಲ್ಲಿ ಬೇಲಿ ಹಾಕಿಸಿ ಜಗಳಕ್ಕೆ ನಿಲ್ಲುವಂತೆ ಕೆಣಕೋದು, ಸೌಲಭ್ಯಗಳು ಬರಲಂತೂ ಬಿಡುವುದಿಲ್ಲ. ಕನಿಷ್ಠ ಜನರೇ ಸ್ವಂತ ಹಣ ಹಾಕಿ ಸೌಲಭ್ಯ–ಕರೆಂಟ್ ಹಾಕಿಸಿಕೊಂಡರೆ ಅದನ್ನು ಬೇರೆಯವರಿಗೆ ಹಣ ನೀಡದಿರುವಂತೆ ಹೇಳಿ ಗೂಂಡಾಗಿರಿ ಮಾಡಿ ಕರೆಂಟ್

ಎಳೆದುಕೊಳ್ಳಲು ಬೆಂಬಲಿಸಿ ಜಗಳ ಮಾಡಿಸುವುದು , ತಾವೇ ಮನೆನುಗ್ಗಿ ಹೆಂಡತಿ ಮಕ್ಕಳನ್ನು ಎಳೆದಾಡಿ ಹೊಡೆದು ಕೊನೆಗೆ ತಿರುಚಿ ತನ್ನ ಹೆಂಡತೀನ ಬಲಾತ್ಕರಿಸಲು ಬಂದ ಎಂದು ಅವರವರೊಳಗೆ ಕೇಸುಹಾಕಿಸೋದು, ಕೋಳಿ ರಕ್ತ ಗೋಡೆಗೆ ಹಚ್ಚಿ ತನ್ನ ಹೆಂಡತೀನ ಬಲಾತ್ಕರಿಸಿದ ಎಂದು ಹೇಳಲು ಹೇಳಿಕೊಟ್ಟು ಕೇಸು ಹಾಕಿಸೋದು.

ಇಂತಹ ನೂರಾರು ಇದ್ದು ಇದರಲ್ಲಿ ಕೆಲವುದರಲ್ಲಿ ಅರುಣ–ಕಿರಣರು ಕಾಣುವುದಿಲ್ಲ. ಕೆಲವುದರಲ್ಲಿ ನೇರವಾಗಿ ಇರುತ್ತಾರೆ. ಮೇಲ್ನೋಟಕ್ಕೆ ಸಾಚಾಗಳ ರೀತಿಯೇ ಇರುತ್ತಾರೆ ಏಕೆಂದರೆ ಇದೆಲ್ಲಾ ನಡೆಯೋದು ಬಡಜನರೊಳಗೆ, ಅಣ್ಣತಮ್ಮಂದಿರನ್ನು ಎತ್ತಿಕಟ್ಟಿಸಿಯೇ ! ಇದು ಕಂಪ್ಲೆಂಟ್ ಆದರೆ ಸ್ಟೇಷನ್‌ಗೆ ಫೋನ್ ಮಾಡಿ " ಇದರ ಸುದ್ಧಿಗೆ ಬರಬೇಡಿ" ಎಂದು ಇವರು ಹೇಳಿದರೆ ಮುಗಿಯಿತು "ರಕ್ಷಕ" ಪೋಲೀಸರು ಗಪ್‌ಚಿಪ್! ಇಲ್ಲದಿದ್ದರೆ ತಾನೇ ಪಂಚಾಯ್ತಿ ಮಾಡಿ, ತನ್ನದಾದ ತೀರ್ಪು ನೀಡಿ ತಾವೇ ಪೋಲೀಸ್ ಕೋರ್ಟು ಎಲ್ಲವೂ ಆಗುತ್ತಾರೆ.

ಫೆಬ್ರವರಿ 1ರಂದು ಪಕ್ಷದ ಪಿ.ಎಲ್.ಜಿ.ಎ. ದಳವು ಇಂತಹ ಅರುಣ–ಕಿರಣರ ಮನೆಗೆ ದಾಳಿ ನಡೆಸಿದಾಗ ಮನೆಯಲ್ಲಿದ್ದು ಅರುಣನಿಗೆ ಗಂಭೀರ ಎಚ್ಚರಿಕೆ ನೀಡಿ, ಅವರಿಬ್ಬರೂ ಇದುವರೆಗೂ ಮಾಡಿದ ಅನ್ಯಾಯ–ಅತ್ಯಾಚಾರಗಳನ್ನು ಅವನಿಗೆ ನೆನಪಿಸಲಾಯಿತು. ಹಾಗೂ ಅವರು ಮಾಡಿದ ಅನ್ಯಾಯ ಅತ್ಯಾಚಾರಗಳಿಗೆ ಪ್ರತಿಯಾಗಿ ಜನರೂ ಕೂಡ ಜನರ ಸೇನೆಯೊಂದಿಗೆ ಸೇರಿ ಪ್ರತೀಕಾರ ತೀರಿಸುತ್ತಾರೆಂದು ತಿಳಿಸುತ್ತಾ, ಆತನ ಮನೆಯ ಕೆಲವು ವಸ್ತುಗಳಿಗೆ ಬೆಂಕಿ ಹಚ್ಚಲಾಯಿತು. ಮತ್ತು ಮನೆಯಲ್ಲಿದ್ದ 2 ಮೊಬೈಲ್‌ಗಳು, ಎರಡು ನಳಿಗೆಯ ಒಂದು ಕೋವಿ– 12 ತೋಟಾಗಳು, 6000–00 ರೂ. ಹಣ, ಕ್ಯಾಮರಾಗಳನ್ನು ಪಕ್ಷದ ವಶಕ್ಕೆ ತೆಗೆದುಕೊಳ್ಳಲಾಯಿತು.

<u>ಪಿ.ಎಲ್.ಜಿ.ಎ.ಯು. ಅವರ ಮುಂದಿಟ್ಟ ಬೇಡಿಕೆಗಳು :</u>

1. ಮೊದಲನೆಯದಾಗಿ ಈ ಕೂಡಲೇ ಅವರು ಜಮೀನು –ಮನೆ (ಮಾರದೆಯೆ ಹಾಗೆ) ಬಿಟ್ಟು ಹೋಗಬೇಕು
2. ಭೂಸುಧಾರಣೆಯಲ್ಲಿ ಹಾಗೂ ಇತರೆ ಕಾರಣಗಳಿಗಾಗಿ ಜನರಿಂದ ಕಿತ್ತುಕೊಂಡ ಎಲ್ಲಾ ಭೂಮಿಗಳನ್ನು ಜನರಿಗೆ ಬಿಟ್ಟುಕೊಡಬಬೇಕು. ಮತ್ತು ಗೇಣಿ ನೀಡಿದ ಗದ್ದೆಗಳನ್ನು ಗೇಣಿದಾರರಿಗೆ ಬಿಡಬೇಕು.

3. ದಬ್ಬಾಳಿಕೆಯಿಂದ ಬೇಲಿ ಹಾಕಿ ಜನರ ಮನೆಗಳ ಸುತ್ತಾ ಓಡಾಡಲು ಬಿಡದಂತೆಯೂ, ಗೋಮಾಳ ಸೊಪ್ಪು ಸೌದೆಗಳಿಗೆ ಸಮಸ್ಯೆಯಾಗುವಂತಾದ ಎಲ್ಲಾ ಬೇಲಿಗಳನ್ನು ಈ ಕೂಡಲೇ ತೆಗಿಯಬೇಕು ಹಾಗೂ ಅಂತಹ ಜಾಗಗಳನ್ನು ಸಂಬಂಧಪಟ್ಟ ಜನರಿಗೆ ಬಿಡಬೇಕು.
4. ತಾವೇ ನಿಂತು ನೇರವಾಗಿ ಅಥವಾ ಪರೋಕ್ಷವಾಗಿ ಜನರ ನಡುವೆ ಜಗಳ ಹಚ್ಚಿ ಹಾಕಿಸಿರುವ ಕೇಸುಗಳನ್ನು ತಕ್ಷಣವೇ ಹಿಂಪಡೆಯಬೇಕು.
5. ಜನರ ಹೆಸರಿನಲ್ಲಿ ಮಾಡಿಸಿಕೊಂಡ ಸೈಟ್‌ಗಳನ್ನು ಸಂಬಂಧಪಟ್ಟವರಿಗೆ ಬಿಡಬೇಕು.

ಇವೆಲ್ಲವನ್ನೂ ಈ ಕೂಡಲೇ ಮಾಡಿದಿದ್ದಲ್ಲಿ ಇನ್ನೂ ಹೆಚ್ಚಿನ ಪರಿಣಾಮ ಮುಂದೆ ಅನುಭವಿಸಬೇಕಾಗುತ್ತದೆಂದು ಎಚ್ಚರಿಸಲಾಯಿತು.

ಮಲೆನಾಡಿನಲ್ಲಿ ಸಿ.ಪಿ.ಐ. (ಮಾವೋವಾದಿ) ಪಕ್ಷವು ಕಾರ್ಯಾರಂಭಿಸಿದಾಗ ಇಲ್ಲಿನ ಭೂಮಾಲೀಕರು–ಭಜರಂಗಿಗಳು "ಶಾಂತ ಮಲೆನಾಡಿನಲ್ಲಿ ರಕ್ತಪಾತ" ! " ಭೂಮಾಲೀಕರು ಮತ್ತು ಕೂಲಿಯವರ ಸುಮಧುರ ಸಂಬಂಧವನ್ನು ಕದಡಿದ್ದಾರೆ" ಎಂದು ಕಿರುಚಾಡತೊಡಗಿದ್ದರು. ಆದರೆ ವಾಸ್ತವವಾಗಿ ಇಂತಹ ಹಲವಾರು "ಸುಮಧುರತೆ" ಗಳು ಬಯಲಾಗದಂತೆ ತಡೆಯುವುದು ಇವರಿಗೆ ಮುಖ್ಯವಾಗಿತ್ತು. ಇವೆಲ್ಲಾ ಎಲ್ಲಿ ಹೊರಬೀಳುತ್ತದೆಯೋ ಎಂಬ ಭಯವೇ ಕಿರುಚಾಟಕ್ಕೆ ಕಾರಣವಾಗಿತ್ತು.

ಈ ಮಲೆನಾಡಿನ ಎಲ್ಲಾ ದುಡಿವ ಜನರ ಆಸ್ತಿ–ಪಾಸ್ತಿಗಳೆಲ್ಲ ಅರುಣ–ಕಿರಣರಂಥ ಲಾಭಕೋರ ಕ್ರೂರಿ ಭೂಮಾಲೀಕರ ಮನೆಗಳಲ್ಲಿ ಸಂಗ್ರಹವಾಗಿವೆ. ಇದು ಜನರಿಗೆ ಸೇರಬೇಕಾದ್ದು ಜನರ ಹಕ್ಕು. ಇಂತಹ ಭೂಮಾಲೀಕರ ವೈಭೋಗ–ಸೊಕ್ಕಿಗಾಗಿ ದುಡಿವ ಜನರಷ್ಟೋ ಆ ಮಣ್ಣಿನಲ್ಲಿ ಹೂತು ಹೋಗಿದ್ದಾರೆ. ರಕ್ತವನ್ನೇ ಬೆವರಾಗಿಸಿದ್ದಾರೆ. ಇವರ ಕೊಬ್ಬಿನ ಚಾಟಿಯೇಟುಗಳಿಗೆ ಮೂಳೆ ಗೂಡಿನ ದೇಹವೊಡ್ಡಿದ್ದಾರೆ. ಇದೆಲ್ಲಾ ಇದುವೆರೂ ನಡೆಯುತ್ತಿತ್ತು, ಆದರೆ ಇನ್ನು ಮುಂದೆ ಇದ್ಯಾವುದು ನಡೆಯದೆಂದು ಜನಸೇನೆಯೊಂದಿಗೆ ಸೇರಿ ಧೃಡವಾಗಿ ಹೇಳಬೇಕಿದೆ. ಅಲ್ಲದೆ ಮಲೆನಾಡಿನಲ್ಲಿ ನಡೆಯುತ್ತಿರುವ ನ್ಯಾಯಯುತ ಸಶಸ್ತ್ರ ಪ್ರಜಾ ಹೋರಾಟದಲ್ಲಿ ಭಾಗವಾಗಿ ಬೆಂಬಲಿಸಿ, ಬಲಪಡಿಸಿ ಮುನ್ನಡೆಸಿ ಜನಾಧಿಕಾರ ಸ್ಥಾಪಿಸಬೇಕೆಂದು ಪಕ್ಷವು ಈ ನಾಡ ಜನರಲ್ಲಿ ಕೇಳಿಕೊಳ್ಳುತ್ತದೆ.

- ✓ ಮಲೆನಾಡಿನಿಂದ ಅರುಣ – ಕಿರಣರಂತಹ ಭೂಮಾಲಿಕರನ್ನು ಒದ್ದೋಡಿಸೋಣ
  ಮಲೆನಾಡನ್ನು ರೈತ–ಕೂಲಿ ಬಡಜನರದ್ದಾಗಿಸೋಣ
- ✓ ಸುಮ್ಮನಿದ್ದರೆ ಸುಲಿಗೆ ತಪ್ಪದು, ದಂಗೆ ಎದ್ದರೆ ಜಯ ನಮ್ಮದು !
- ✓ ಅರುಣ–ಕಿರಣರಂತಹ ಕ್ರೂರಿ –ಲಂಪಟ ಭೂಮಾಲೀಕರನ್ನು ಬಯಲಿಗೆಳೆಯೋಣ
  ಅವರಲ್ಲಿನ ಜನರ ಆಸ್ತಿಯನ್ನು ವಶಪಡಿಸಿಕೊಳ್ಳೋಣ !!
- ✓ ಮಲೆನಾಡಿನಲ್ಲಿ ಬಲಿಷ್ಠ ಭೂಮಾಲೀಕ ವಿರೋಧಿ ಹೋರಾಟವನ್ನು ಕಟ್ಟಿ ಬೆಳೆಸೋಣ !

ಕ್ರಾಂತಿಕಾರಿ ಶುಭಾಷಯಗಳೊಂದಿಗೆ,

ಸಿಪಿಐ (ಮಾವೋವಾದಿ)

ಧೃಕ್ಪತ ಪ್ರದೇಶ

ಮಾರ್ಚ್2009 ಕರ್ನಾಟಕ